ಎಸ್.ಎ.ಸಿ.ಬಿ.ನಂ.145/2025-26 ದಿನಾಂಕ:02.08.2025

# ನೇಮಕಾತಿ ಪ್ರಕಟಣೆ

## ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನ

ಬ್ಯಾಂಕಿನಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳನ್ನು ಸಾಮಾನ್ಯ ವರ್ಗದಿಂದ ನೇರ ನೇಮಕಾತಿ ಮೂಲಕ ಈ ಕೆಳಕಂಡಂತೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

| ಕ್ರ.ಸಂ. | ಹುದ್ದೆಯ ಹೆಸರು | ಹುದ್ದೆ ಸಂಖ್ಯೆ | ವೇತನ ಶ್ರೇಣಿ | ವಿದ್ಯಾರ್ಹತೆ |
|---|---|---|---|---|
| 1 | ಸಹಾಯಕ ವ್ಯವಸ್ಥಾಪಕ | 01 | 17650-450-19000-500-21000-600-24600-700-28800-800-32000 | (i) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯ ದಿಂದ ಶೇಕಡ 60 ಕನಿಷ್ಟ ಅಂಕಗಳಕೆಯ ಬಿ.ಕಾಂ., ಪದವಿ.<br>(ii) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯ ದಿಂದ ಎಂ.ಕಾಂ., ಪದವಿ ಪಡೆದವರಿಗೆ ಆದ್ಯತೆ.<br>(iii) ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಷನ್ಸ್ ಜ್ಞಾನ ಹೊಂದಿರುವುದು ಕಡ್ಡಾಯ.<br>(iv) ಐದು ವರ್ಷಗಳ ಬ್ಯಾಂಕಿಂಗ್ ಸೇವಾ ಅನುಭವ ಹೊಂದಿರುವವರಿಗೆ ಆದ್ಯತೆ.<br>(v) ಡಿಪ್ಲೋಮಾ ಇನ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನಲ್ಲಿ ಪಾಸಾದವರಿಗೆ ಆದ್ಯತೆ. |
| 2 | ಕಿರಿಯ ಸಹಾಯಕ | 07 | 14550-350-15600-400-17200-450-19000-500-21000-600-24600-700-26700 | (i) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯ ದಿಂದ ಶೇಕಡ 50 ಕನಿಷ್ಟ ಅಂಕಗಳಕೆಯ ಬಿ.ಕಾಂ., ಪದವಿ.<br>(ii) ಕಂಪ್ಯೂಟರ್ ಆಪರೇಷನ್ ಮತ್ತು ಅಪ್ಲಿಕೇಷನ್ಸ್ ಜ್ಞಾನ ಹೊಂದಿರುವುದು ಕಡ್ಡಾಯ. |
| 3 | ಅಟೆಂಡರ್ | 02 | 11000-200-12000-250-13000-300-14200-350-15600-400-17200-450-19000 | (i) ಎಸ್.ಎಸ್.ಎಲ್.ಸಿ./ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ/ ಉತ್ತೀರ್ಣರಾಗಿರಬೇಕು<br>(ii) ಲಘು ವಾಹನ ಚಾಲನಾ ಪರವಾನಗಿ ಹೊಂದಿರುವವರಿಗೆ ಆದ್ಯತೆ. |

ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ:**04/08/2025** ಹಾಗೂ ಕೊನೆಯ ದಿನಾಂಕ:**20/08/2025**

ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ ವಿಳಾಸ www.sreeanjaneyabank.com ದಲ್ಲಿ ಆನ್‌ಲೈನ್ ಅರ್ಜಿ, ಅರ್ಹತೆಗಳು ಮತ್ತು ಇನ್ನಿತರ ನಿಬಂಧನೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

**ಆನ್‌ಲೈನ್ ಅರ್ಜಿ, ಅರ್ಹತೆಗಳು ಮತ್ತು ಇನ್ನಿತರ ನಿಬಂಧನೆಗಳು:**

1. **ವಯೋಮಿತಿ**: ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳು. ಎಲ್ಲಾ ಹುದ್ದೆಗಳನ್ನು ಸಾಮಾನ್ಯ ವರ್ಗದ(General Merit) ಮೂಲಕ ತುಂಬಲು ತೀರ್ಮಾನಿಸಿರುವುದರಿಂದ ಅಂತಹ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಆಯಾ ವರ್ಗದವರು ಹೊಂದಿರುವ ವಯೋಮಿತಿಯನ್ನು ಮೀರಿರಬಾರದು ಮತ್ತು ಹುದ್ದೆಗಳ ನೇಮಕಾತಿಯು ಜೇಷ್ಠತೆ ಅನುಸಾರ ಅಧಿಕ ಅಂಕಗಳಿಸಿದ ಯಾವುದೇ ಅಭ್ಯರ್ಥಿಯಾಗಿದ್ದಲ್ಲಿ ಅವರನ್ನು ಸಾಮಾನ್ಯ ಅಭ್ಯರ್ಥಿ(General Candidate) ಎಂದೇ ಪರಿಗಣಿಸಲಾಗುವುದು. ಅಭ್ಯರ್ಥಿಗಳ ವಯೋಮಿತಿ ವಿವರ ಕೆಳಕಂಡಂತಿದೆ.

| | |
|---|---|
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1 | 40 ವರ್ಷಗಳು |
| ಇತರೇ ಹಿಂದುಳಿದ ವರ್ಗ(2ಎ, 2ಬಿ, 3ಎ, 3ಬಿ) | 38 ವರ್ಷಗಳು |
| ಇತರೇ ಅಭ್ಯರ್ಥಿಗಳಿಗೆ | 35 ವರ್ಷಗಳು |

1. **ಆಯ್ಕೆ ವಿಧಾನ**: ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಸಹಾಯಕ ವ್ಯವಸ್ಥಾಪಕ ಹಾಗೂ ಕಿರಿಯ ಸಹಾಯಕ ಹುದ್ದೆಗೆ:

   200 ಅಂಕಗಳ ಲಿಖಿತ ಪರೀಕ್ಷೆಯಿದ್ದು, ಕನ್ನಡ ಭಾಷೆಗಾಗಿ- 50 ಅಂಕಗಳು, ಸಾಮಾನ್ಯ ಇಂಗ್ಲೀಷ್‌ಗಾಗಿ-25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ-25 ಅಂಕಗಳು, ಸಹಕಾರಿ ವಿಷಯಕ್ಕಾಗಿ-50 ಅಂಕಗಳು, ಭಾರತ ಸಂವಿಧಾನಕ್ಕೆ-25 ಅಂಕಗಳು ಹಾಗೂ ಬ್ಯಾಂಕಿನ ಉದ್ದೇಶಗಳು ಮತ್ತು ಕಾರ್ಯಚಟುವಟಿಕೆ ವಿಷಯಗಳಿಗೆ-25 ಅಂಕಗಳು ಒಳಗೊಂಡಿರುತ್ತದೆ. ಈ ರೀತಿ ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳ ಶೇಕಡಾವಾರು ಆಧಾರದ ಮೇಲೆ, 1:5ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು.

2. **ನಿಬಂಧನೆಗಳು**:
   1. ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್(Online) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು ಹಾಗೂ ಆನ್‌ಲೈನ್(Online)ನಲ್ಲಿ ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು.
   2. ಅಭ್ಯರ್ಥಿಗಳು ಆನ್‌ಲೈನ್(Online) ಮೂಲಕ ಸಲ್ಲಿಸುವ ಅರ್ಜಿಗಳಲ್ಲಿ ಅಪೂರ್ಣ ಹಾಗೂ ಅಸ್ಪಷ್ಟ ದಾಖಲೆಗಳನ್ನು ಅಥವಾ ತಪ್ಪು/ಅಪೂರ್ಣ ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ತಿರಸ್ಕೃತ ಅರ್ಜಿಗಳ ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲ.
   3. ಅಭ್ಯರ್ಥಿಗಳು ಆನ್‌ಲೈನ್(Online) ಮುಖಾಂತರ ಅರ್ಜಿಗಳನ್ನು ಭರ್ತಿ ಮಾಡಿ ನಿಗದಿತ ಅರ್ಜಿ ಶುಲ್ಕ ರೂ.1,180/-(18% ಜಿಎಸ್‌ಟಿ ಸೇರಿ)ಗಳನ್ನು ಆನ್‌ಲೈನ್(Online)ನಲ್ಲಿ ಪಾವತಿಸಿ ಚಲನ್‌ನನ್ನು ಆನ್‌ಲೈನ್ ಮುಖಾಂತರ ಅಪ್‌ಲೋಡ್ ಮಾಡುವುದು. ವಿವಿಧ ಹುದ್ದೆಗಳಿಗೆ ಪ್ರತ್ಯೇಕವಾದ ಅರ್ಜಿ ಶುಲ್ಕ ಪಾವತಿಸತಕ್ಕದ್ದು, ನಿಗದಿತ ಅರ್ಜಿ ಶುಲ್ಕ ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.
   4. ಈ ನೇಮಕಾತಿ ಪ್ರಕಟಣೆಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಯಾಗಬಹುದಾಗಿದ್ದು, ನೇಮಕಾತಿ ಪ್ರಾಧಿಕಾರವು ಬದಲಾವಣೆ ಮಾಡುವ ಮತ್ತು ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.
   5. ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಸಲ್ಲಿಸತಕ್ಕದ್ದು.
   6. ವಿದ್ಯಾರ್ಹತೆಗೆ ಸಂಬಂಧಿಸಿದ ಅಂಕಪಟ್ಟಿಗಳು, ಪದವಿ ಪ್ರಮಾಣ ಪತ್ರಗಳು, ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಗಳನ್ನು, ಒಟ್ಟು ಪಡೆದ ಅಂಕಗಳನ್ನು ಮತ್ತು ಶೇಕಡವಾರು ಅಂಕಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು. ಅಂಕಪಟ್ಟಿಗಳನ್ನು ಸಂದರ್ಶನದ ವೇಳೆಯಲ್ಲಿ

ಹಾಜರುಪಡಿಸಬೇಕು. ಪದವಿ ಶಿಕ್ಷಣದಲ್ಲಿ ಕಂಪ್ಯೂಟರ್, ಪದವಿಯ ಒಂದು ವಿಷಯವಾಗಿದ್ದಲ್ಲಿ ಕಂಪ್ಯೂಟರ್ ಕೋರ್ಸ್‌ನ ದೃಢೀಕರಣ ಅಗತ್ಯವಿಲ್ಲ.

7. ಲಿಖಿತ ಪರೀಕ್ಷೆ/ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು. ಲಿಖಿತ ಪರೀಕ್ಷೆಗೆ ದಿನಾಂಕ, ವೇಳೆ ಮತ್ತು ಸ್ಥಳದ ವಿವರಗಳನ್ನು ಬ್ಯಾಂಕ್ ವೆಬ್‌ಸೈಟ್(Website)ನಲ್ಲಿ ಪ್ರಕಟಿಸಲಾಗುವುದು.
8. ಅಭ್ಯರ್ಥಿಯು ಸಂಬಂಧಪಟ್ಟ ವಿದ್ಯಾರ್ಹತೆಯ ಪದವಿಯ ಅಂಕಪಟ್ಟಿ, ಕಂಪ್ಯೂಟರ್ ಜ್ಞಾನ ಹೊಂದಿರುವ ಪ್ರಮಾಣ ಪತ್ರ ಮತ್ತು ಇತರೆ ಎಲ್ಲಾ ಅರ್ಹತಾ ದಾಖಲಾತಿಗಳ ಮೂಲ ಪ್ರಮಾಣ ಪತ್ರಗಳನ್ನು ಅಥವಾ ಸ್ವಯಂ ದೃಢೀಕರಿಸಿದ ಮೂಲ ದಾಖಲಾತಿಗಳ ಪ್ರತಿಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು.
9. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಗಳಲ್ಲಿ ಅಪ್‌ಲೋಡ್ ಮಾಡುವ ಮಹಿತಿಗಳ ಆಧಾರದ ಮೇಲೆ ಅವರುಗಳು ಲಿಖಿತ ಪರೀಕ್ಷೆಗೆ ಅರ್ಹರೇ ಎಂಬುದನ್ನು ಬ್ಯಾಂಕು ಪರಿಶೀಲಿಸಿ, ಮೇಲ್ನೋಟಕ್ಕೆ ಅರ್ಹರೆಂದು ಕಂಡು ಬಂದ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕ್ಷೆಗೆ ಕರೆ ಪತ್ರಗಳನ್ನು ವೆಬ್‌ಸೈಟ್(Website) ನಲ್ಲಿ ಪ್ರಕಟಿಸಲಾಗುತ್ತದೆ ಹಾಗೂ ಅಭ್ಯರ್ಥಿಗಳು ಕರೆ ಪತ್ರಗಳನ್ನು Download ಮಾಡಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ನಿಗದಿಪಡಿಸಿರುವ ವಿದ್ಯಾರ್ಹತೆಯ ಪ್ರಮಾಣ ಪತ್ರಗಳು, ವಯೋಮಿತಿ ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿಗಳನ್ನು ಅಪ್‌ಲೋಡ್ ಮಾಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.
10. ಅಭ್ಯರ್ಥಿಗಳಿಗೆ ಕನ್ನಡ ಭಾಷೆಯ ಜ್ಞಾನ(ಓದಲು ಮತ್ತು ಬರೆಯಲು) ಕಡ್ಡಾಯವಾಗಿರುತ್ತದೆ.
11. ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣವನ್ನು ನೀಡದೇ ರದ್ದುಗೊಳಿಸುವ ಅಥವಾ ಮುಂದೂಡುವ ಅಧಿಕಾರವನ್ನು ಬ್ಯಾಂಕಿನ ಆಡಳಿತ ಮಂಡಲಿ ಹೊಂದಿರುತ್ತದೆ.
12. ನೇಮಕಾತಿಯಾದ ಅಭ್ಯರ್ಥಿಗಳ ಪರೀಕ್ಷಣಾವಧಿ(ಪ್ರೊಬೇಷನರಿ) **ಒಂದು ವರ್ಷ** ಅವಧಿಯಾಗಿರುತ್ತದೆ. ಇದನ್ನು ವಿಸ್ತರಿಸುವ ಅಧಿಕಾರ ಬ್ಯಾಂಕಿನ ಆಡಳಿತ ಮಂಡಲಿ ಕಾಯ್ದಿರಿಸಿದೆ.
13. ಅರ್ಜಿಗಳನ್ನು ಆನ್‌ಲೈನ್ ಮೂಲಕ ಭರ್ತಿ ಮಾಡಿ ಅರ್ಜಿ ಶುಲ್ಕವನ್ನು UPI ಮುಖಾಂತರ ಅರ್ಜಿ ಶುಲ್ಕ ಮತ್ತು Payment Gateway ಛಾರ್ಜಸ್‌ನ್ನು ಪಾವತಿ ಮಾಡತಕ್ಕದ್ದು. ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ**:20/08/2025ರ ದಿನಾಂತ್ಯದ** ಒಳಗಾಗಿ ಪಾವತಿಸತಕ್ಕದ್ದು, ತಪ್ಪಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. Online payment ಹೊರತುಪಡಿಸಿ ಡಿ.ಡಿ. ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.
14. ಅಭ್ಯರ್ಥಿತ್ವದ ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಬ್ಯಾಂಕು ಯಾವುದೇ ಪತ್ರ, ಇ-ಮೇಲ್ ವ್ಯವಹಾರವನ್ನು ನಡೆಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ (ಬೆಳಗ್ಗೆ 9.30 ಘಂಟೆಯಿಂದ ಮಧ್ಯಾಹ್ನ 01.00 ಘಂಟೆಯವರೆಗೆ ಹಾಗೂ ಮಧ್ಯಾಹ್ನ 03.00 ಘಂಟೆಯಿಂದ ಸಂಜೆ 06.30 ಘಂಟೆಯವರೆಗೆ) ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು: 080-23564151, 080-23563302.
15. ಕಾಲಕಾಲಕ್ಕೆ ವೆಬ್‌ಸೈಟ್(Website) ಪರಿಶೀಲಿಸಲು ಸೂಚಿಸಿದೆ.

**<u>ದುರ್ನಡತೆ:</u>**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಗಾಗಿ ನಡೆಸಲಾದ ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸುತ್ತಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ /ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು. ಮುಂದೆ ಬ್ಯಾಂಕ್ ನೇಮಕಾತಿ ಮಾಡುವ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

**<u>ನಿರ್ಬಂಧ:</u>**

1. ಯಾವುದೇ ನಿಷೇದಿತ ಸಂಘ ಸಂಸ್ಥೆಯ ಸದಸ್ಯನಾಗಿರುವಲ್ಲಿ ಅಥವಾ ಸದಸ್ಯನಾಗಿದ್ದಲ್ಲಿ ಅಥವಾ ಯಾವುದೇ ನಿಷೇದಿತ ಸಂಸ್ಥೆಯ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ
2. ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವತ್ತನಾದಲ್ಲಿ
3. ಕಾನೂನು ಭಂಗ ಮಾಡಿ ಹಿಂಸಾಕೃತ್ಯದಲ್ಲಿ ತೊಡಗಿಕೊಂಡಿದ್ದಲ್ಲಿ
4. ಭಾರತ ದೇಶದ ಸಾರ್ವಭೌಮ ಹಾಗೂ ಸುಭದ್ರತೆಗೆ ಧಕ್ಕೆ ತರುವ ಕಾರ್ಯದಲ್ಲಿ ತೊಡಗಿಕೊಂಡಿದ್ದಲ್ಲಿ
5. ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ಉಚ್ಛಾಟನೆಗೊಂಡಿದ್ದಲ್ಲಿ
6. ವ್ಯಕ್ತಿಯು ಕಾನೂನುಬಾಹಿರ ಕೃತ್ಯಗಳಲ್ಲಿ ತೊಡಗಿ ಅಪರಾಧಕ್ಕೆ ಒಳಗಾದ ಪ್ರಸಂಗಗಳಲ್ಲಿ, ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ವಿವಾಹವಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಿರುವುದಿಲ್ಲ.

**ವಿಶೇಷ ಸೂಚನೆ: ನೇಮಕಾತಿ ವಿಷಯವಾಗಿ ಬ್ಯಾಂಕಿನ ಆಡಳಿತ ಮಂಡಲಿಯೊಂದಿಗೆ ಚರ್ಚೆಗೆ ಅವಕಾಶವಿರುವುದಿಲ್ಲ.**